# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ವಾರ್ಡ್ ಸಂಖ್ಯೆ.27/100 ಬಾಣಸವಾಡಿಗೆ ಸಂಬಂಧಿಸಿದಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ಕಛೇರಿಯ ಸಭಾಂಗಣದಲ್ಲಿ ದಿನಾಂಕ: 04-03-2023 ರಂದು ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು**

**ಹಾಜರಿದ್ದ ಅಧಿಕಾರಿಗಳು**

1. ಶ್ರೀ ವಿನೋದ್.ಕೆ.ಎಮ್, ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು
2. ಶ್ರೀ ಶಂಕರಪ್ಪ, ಸದಸ್ಯ ಕಾರ್ಯದರ್ಶಿ ಮತ್ತು ಸಂಚಾಲಕರು,
3. ಶ್ರೀ ಸಂದೀಪ್, ಸಹಾಯಕ ಅಭಿಯಂತರರು, ವಾರ್ಡ್ ಸಂಖ್ಯೆ.27/100
4. ಶ್ರೀ ಆಯೇಷ ಲೀನ (SWD)
5. ಶ್ರೀ ಮಂಜುನಾಥ (JE, BWSSB)
6. ಶ್ರೀ ಹನುಮಂತೇ ಗೌಡ (ASI Ramamurthynagar, Traffic Police Station)
7. ಶ್ರೀ ಮುಕುಂದಯ್ಯ (ASI, Banasawadi Traffic Police Station)
8. ಶ್ರೀ ಶಿವಯ್ಯ, ಕೆಲಸ ಪರಿವೀಕ್ಷಕರು, BWSSB
9. ಶ್ರೀ ಆನಂದ, ಕಿರಿಯ ಆರೋಗ್ಯ ನಿರೀಕ್ಷಕರು.

**ಹಾಜರಿದ್ದ ಸದಸ್ಯರು/ ಸ್ಥಳೀಯ ನಿವಾಸಿಗಳು**

1. ಶ್ರೀ ಪ್ರಶಾಂತ್, ಸ್ಥಳೀಯರು
2. ಶ್ರೀ ಅರುಣಾಚಲಂ, ಸ್ಥಳೀಯರು
3. ಶ್ರೀ/ಶ್ರೀಮತಿ ಮಣಿ ಮೇಘಾಲೈ
4. ಶ್ರೀ ಮುರುಳಿ.ಬಿ, ಸ್ಥಳೀಯರು
5. ಶ್ರೀ ಜೋಸೆಫ್ ರಾಕೇಶ್, ಸ್ಥಳೀಯರು
6. ಶ್ರೀ ರಾಖಿ ಕ್ರಿಸ್ಟೋಫರ್, ಸ್ಥಳೀಯರು
7. ಶ್ರೀ ಸುಂದರ್ ವೇಣುಗೋಪಾಲ್, ಸ್ಥಳೀಯರು
8. ಶ್ರೀ ಟಿ ರಾಮ್‌ಕುಮಾರ್, ಸ್ಥಳೀಯರು
9. ಶ್ರೀ ರಾಜು.ಹೆಚ್.ಬಿ, ಸ್ಥಳೀಯರು
10. ಶ್ರೀ ದಯಾನಂದ, ಸ್ಥಳೀಯರು.

ಈ ಸಭೆಗೆ ಹಾಜರಾಗಿದ್ದ ಅಧ್ಯಕ್ಷರು (ನೋಡೆಲ್ ಅಧಿಕಾರಿ) ಹಾಗೂ ಅಧಿಕಾರಿಗಳನ್ನು ವಾರ್ಡ್‌ನ ಸದಸ್ಯ ಕಾರ್ಯದರ್ಶಿ ಹಾಗೂ ಸಂಚಾಲಕರುರವರು ಸ್ವಾಗತವನ್ನು ಕೋರಿ, ಸಭೆಯನ್ನು ಪ್ರಾರಂಭಿಸಲಾಯಿತು.

| ಕ್ರಸಂ | ಚರ್ಚಿಸಿದ ವಿಷಯಗಳು | ಸಂಬಂಧಪಟ್ಟ ಇಲಾಖೆ |
|---|---|---|
| 1 | ವಾರ್ಡ್ ವ್ಯಾಪ್ತಿಯ ಓ.ಎಂ.ಬಿ.ಆರ್ ಲೇಔಟ್, 4ನೇ ಅಡ್ಡರಸ್ತೆಯಲ್ಲಿ ಇತ್ತೀಚೆಗೆ ವಾಹನ ಸಂಚಾರ ದಟ್ಟಣೆ ಹೆಚ್ಚಾಗುತ್ತಿದ್ದು, ಈ ಬಗ್ಗೆ ಸ್ಥಳೀಯ ಸಂಚಾರ ಪೊಲೀಸ್ ಇಲಾಖೆಯವರು ಒಂದು ದಿನ ಒಂದು ಬದಿಯಲ್ಲಿ ವಾಹನ ನಿಲುಗಡೆ ಮಾಡಲು ಹಾಗೂ ಈ ರಸ್ತೆಗಳಲ್ಲಿ " No Parking Board" ಅಳವಡಿಸಲು ಶ್ರೀ ಮುರುಳಿ.ಬಿ ರವರು ಸಭೆಯಲ್ಲಿ ಪ್ರಸ್ತಾಪಿಸಿದರು. | ರಾಮಮೂರ್ತಿನಗರ ಸಂಚಾರ ಪೊಲೀಸ್ ಠಾಣೆ<br>**Ramamurthy Nagar Police Station**<br>**Ramamurthy Nagar (Traffic Police Department)** |

| | | |
|---|---|---|
| 2 | ವಾರ್ಡ್ ವ್ಯಾಪ್ತಿಯ ಓ.ಎಂ.ಬಿ.ಆರ್ ಲೇಔಟ್, 4ನೇ ಅಡ್ಡರಸ್ತೆಯಲ್ಲಿ ಪುಂಡ ಪೋಕಿರಿಗಳು ದ್ವಿ ಚಕ್ರ ವಾಹನದಲ್ಲಿ ವೀಲಿಂಗ್ ಮಾಡಿಕೊಂಡು ಸಾರ್ವಜನಿಕರಿಗೆ ತೊಂದರೆಯನ್ನು ಉಂಟು ಮಾಡುತ್ತಿದ್ದು, ಈ ಬಗ್ಗೆ ಕ್ರಮ ವಹಿಸಲು ಶ್ರೀ ಮುರುಳಿ.ಬಿ ರವರು ಸಭೆಯಲ್ಲಿ ಪ್ರಸ್ತಾಪಿಸಿದರು. | ರಾಮಮೂರ್ತಿನಗರ ಸಂಚಾರ ಪೊಲೀಸ್ ಠಾಣೆ<br>**Ramamurthy Nagar Police Station**<br>**Ramamurthy Nagar (Traffic Police Department)** |
| 3 | ವಾರ್ಡ್ ವ್ಯಾಪ್ತಿಯ ಓ.ಎಂ.ಬಿ.ಆರ್ ಲೇಔಟ್, 2ನೇ ಡಿ ಅಡ್ಡರಸ್ತೆಯ ರಿಯೋ ಆರ್ಚಿಡ್ ಅಪಾರ್ಟ್‌ಮೆಂಟ್‌ನ ಖಾಲಿ ಜಾಗದಲ್ಲಿ ಅಪಾರ್ಟ್‌ಮೆಂಟ್‌ನ ನಿವಾಸಿಗಳು ಕಸವನ್ನು ಎಸೆಯುತ್ತಿದ್ದು, ಇದರಿಂದ ಅಪಾರ್ಟ್‌ಮೆಂಟ್‌ನ ನಿವಾಸಿಗಳಿಗೆ ತೊಂದರೆ ಯಾಗುತ್ತಿರುವುದಾಗಿ ಸಭೆಯಲ್ಲಿ ಪ್ರಸ್ತಾಪಿಸಿದರು. | ಕಿರಿಯ ಆರೋಗ್ಯ ನಿರೀಕ್ಷಕರು, ವಾರ್ಡ್ ಸಂಖ್ಯೆ.27/100 ರವರು ಮಾತನಾಡಿ ಈ ಬಗ್ಗೆ ಈ ಕ್ರಮ ವಹಿಸುವುದಾಗಿ ಸಭೆಗೆ ತಿಳಿಸಿದರು. |
| 4 | ವಾರ್ಡ್ ವ್ಯಾಪ್ತಿಯ ಓ.ಎಂ.ಬಿ.ಆರ್ ಲೇಔಟ್, 6ನೇ ಅಡ್ಡರಸ್ತೆಯಿಂದ 4ನೇ ಅಡ್ಡರಸ್ತೆಯವರೆಗೆ ಬಿಡಬ್ಲ್ಯೂ.ಎಸ್.ಎಸ್.ಬಿ ವತಿಯಿಂದ ಅಳವಡಿಸಿರುವ 10" ಇಂಚು, 8" ಇಂಚು ಹಾಗೂ 6" ಇಂಚುಗಳ ಪೈಪ್‌ಲೈನ್ ಅಳವಡಿಸಿದ್ದು, ಈ ಪ್ರದೇಶದಲ್ಲಿ ಜನಸಾಂದ್ರತೆ ಹೆಚ್ಚಾಗಿದ್ದು, ಈಗಾಗಲೇ ಅಳವಡಿಸಿರುವ ಪೈಪುಗಳ ಬದಲಾಗಿ ಹೆಚ್ಚಿನ ಸಾಮರ್ಥ್ಯದ ಪೈಪ್‌ಗಳನ್ನು ಅಳವಡಿಸಲು ಶ್ರೀ ಮುರುಳಿ.ಬಿ ರವರು ಸಭೆಯಲ್ಲಿ ಪ್ರಸ್ತಾಪಿಸಿದರು. | **BWSSB Department**<br>**(OMBR Layout)** |
| 5 | ವಾರ್ಡ್ ವ್ಯಾಪ್ತಿಯ 8ನೇ ಮುಖ್ಯರಸ್ತೆಯ ನಂ.217 1ನೇ ಬ್ಲಾಕ್‌ನಲ್ಲಿನ ಮರವು ಹೆಮ್ಮರವಾಗಿ ಬೆಳೆದಿರುವುದರಿಂದ ಮರದ ಕೊಂಬೆ ರೆಂಬೆಗಳನ್ನು ಕತ್ತರಿಸಲು ಈ ಹಿಂದಿನ ನಾಲ್ಕು ವಾರ್ಡ್ ಕಮಿಟಿ ಸಭೆಗಳಲ್ಲಿ ಪ್ರಸ್ತಾಪಿಸಲಾಗಿದ್ದರೂ ಸಹ ಈ ವರೆವಿಗೂ ಯಾವುದೇ ಕ್ರಮ ಕೈಗೊಳ್ಳದೇ ಇರುವುದರಿಂದ, ಈ ಬಗ್ಗೆ ಕೂಡಲೇ ಅತೀ ತುರ್ತಾಗಿ ಕ್ರಮ ವಹಿಸಲು ಸಭೆಯಲ್ಲಿ ಮತ್ತೊಮ್ಮೆ ಶ್ರೀ ಪ್ರಶಾಂತ್ ರವರು ಸಭೆಯಲ್ಲಿ ತಿಳಿಸಿದರು. | **Forest Department**<br>**(East)** |
| 6 | ವಾರ್ಡ್ ವ್ಯಾಪ್ತಿಯಲ್ಲಿರುವ ಎಲ್ಲಾ ಬಡಾವಣೆ, ಮುಖ್ಯರಸ್ತೆ ಹಾಗೂ ಅಡ್ಡರಸ್ತೆಗಳಲ್ಲಿರುವ ಹಳೆಯ ಮರಗಳ ಕೊಂಬೆ ರೆಂಬೆಗಳು ರಸ್ತೆಗೆ ಚಾಚಿಕೊಂಡಿದ್ದು, ಇದರಿಂದ ಸಾರ್ವಜನಿಕರು ಹಾಗೂ ವಾಹನ ಸವಾರರಿಗೆ ತೊಂದರೆಯಾಗುತ್ತಿದ್ದು, ಇವುಗಳನ್ನು ಕೂಡಲೇ ತೆರವುಗೊಳಿಸಲು ಸಭೆಯಲ್ಲಿ ಪ್ರಸ್ತಾಪಿಸಲಾಯಿತು. | **Forest Department**<br>**(East)** |
| 7 | ಬಾಣಸವಾಡಿ ವ್ಯಾಪ್ತಿಯ 2ನೇ ಡಿ ಅಡ್ಡರಸ್ತೆ, ಹೆಚ್.ಆರ್.ಬಿ.ಆರ್ 1ನೇ ಬ್ಲಾಕ್ Jai gopal garodia school ಯಿಂದ 8ನೇ ಮುಖ್ಯರಸ್ತೆಯವರೆಗೆ ಬೃಹತ್ ನೀರುಗಾಲುವೆ ವರೆಗೆ ತ್ಯಾಜ್ಯ ನೀರಿನ ನಿರ್ವಹಣೆ ರವರು ಪೈಪ್‌ಲೈನ್ ಅಳವಡಿಸಿದ್ದು, ಇದರಿಂದ ಸದರಿ ಪ್ರದೇಶದಲ್ಲಿ ಮಳೆ ನೀರು ಶೇಖರಣೆಯಾಗುತ್ತಿದ್ದು, ಇದರಿಂದ ಮಳೆಗಾಲದಲ್ಲಿ ತೊಂದರೆಯಾಗುವ ಸಾಧ್ಯತೆ ಇರುವುದರಿಂದ ಸದರಿ ಪೈಪ್‌ಲೈನ್ ಅನ್ನು ಕೂಡಲೇ ಸ್ಥಳಾಂತರಿಸಲು ಸಭೆಗೆ ಪ್ರಸ್ತಾಪಿಸಿದರು. | ಸಹಾಯಕ ಕಾರ್ಯಪಾಲಕ ಅಭಿಯಂತರರು / ಸಹಾಯಕ ಅಭಿಯಂತರರು<br>**AEE/AE- WWM** |

| | | |
|---|---|---|
| 8 | ಬಾಣಸವಾಡಿ ವ್ಯಾಪ್ತಿಯ ಹೆಚ್.ಆರ್.ಬಿ.ಆರ್ ಲೇಔಟ್, 9ನೇ ಮುಖ್ಯರಸ್ತೆ ಹಾಗೂ 3ನೇ ಅಡ್ಡರಸ್ತೆಯ ಜಂಕ್ಷನ್‌ನಲ್ಲಿ ಪಾನಿ ಪೂರಿ ಅಂಗಡಿಯನ್ನು ಇಟ್ಟುಕೊಂಡು ವ್ಯಾಪಾರ ಮಾಡುತ್ತಿರುವುದರಿಂದ ಈ ಪ್ರದೇಶದಲ್ಲಿ ಸಂಚಾರ ದಟ್ಟಣೆ ಉಂಟಾಗುತ್ತಿದ್ದು, ಈ ಬಗ್ಗೆ ಕ್ರಮ ವಹಿಸಲು ಸಭೆಯಲ್ಲಿ ಪ್ರಸ್ತಾಪಿಸಿದರು. | ಕಿರಿಯ / ಹಿರಿಯ ಆರೋಗ್ಯ ನಿರೀಕ್ಷಕರು, ವಾರ್ಡ್ ಸಂಖ್ಯೆ.27/100 ರವರು ಮಾತನಾಡಿ ಈ ಬಗ್ಗೆ ಈ ಕ್ರಮ ವಹಿಸುವುದಾಗಿ ಸಭೆಗೆ ತಿಳಿಸಿದರು. |
| 9 | ಬಾಣಸವಾಡಿ ವ್ಯಾಪ್ತಿಯ ಜೈ ಜವಾನ್‌ನಗರ 5ನೇ ಅಡ್ಡರಸ್ತೆಯಲ್ಲಿ ಬಿ.ಡ.ಬ್ಲ್ಯೂ.ಎಸ್.ಎಸ್.ಬಿ ವತಿಯಿಂದ ಅಳವಡಿಸಿರುವ ಮ್ಯಾನ್‌ಹೋಲ್ ರಸ್ತೆಯ ಮಟ್ಟಕ್ಕಿಂತ ಎತ್ತರದಲ್ಲಿರುವುದರಿಂದ ವಾಹನ ಸವಾರರಿಗೆ ತೊಂದರೆಯಾಗುತ್ತಿದ್ದು, ಈ ಬಗ್ಗೆ ಕೂಡಲೇ ಕ್ರಮ ವಹಿಸಲು ಮಣಿ ಮೇಘಲೈ ರವರು ಸಭೆಯಲ್ಲಿ ಪ್ರಸ್ತಾಪಿಸಿದರು. | **BWSSB Department (OMBR Layout)** |
| 10 | ಬಾಣಸವಾಡಿ ವ್ಯಾಪ್ತಿಯ ಜೈ ಜವಾನ್‌ನಗರ ಇಲ್ಲಿ ಬೀದಿ ದೀಪಗಳ ಸ್ವಿಚ್ ಟೈಮರ್‌ಗಳನ್ನು ಅಳವಡಿಸಲು ಕ್ರಮ ವಹಿಸಲು ಮಣಿ ಮೇಘಲೈ ರವರು ಸಭೆಯಲ್ಲಿ ಪ್ರಸ್ತಾಪಿಸಿದರು. | **ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೀದಿ ದೀಪಗಳ ವಿಭಾಗ-ಪೂರ್ವ ವಲಯ** |
| 11 | ಬಾಣಸವಾಡಿ ವ್ಯಾಪ್ತಿಯಲ್ಲಿ ಕೋವಿಡ್ ಲಸಿಕೆ ಹಾಕುವ ಸ್ಥಳದ ಮಾಹಿತಿ ಹಾಗೂ ವಾರ್ಡಿನಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರದ ಮಾಹಿತಿ ನೀಡುವ ಬಗ್ಗೆ ಮಣಿ ಮೇಘಲೈ ರವರು ಸಭೆಯಲ್ಲಿ ಪ್ರಸ್ತಾಪಿಸಿದರು. | ಆರೋಗ್ಯ ವೈಧ್ಯಾಧಿಕಾರಿಗಳು/ ಹಿರಿಯ ಆರೋಗ್ಯ ಪರಿವೀಕ್ಷಕರು/ **MOH/SHI** |
| 12 | ವಾರ್ಡ್ ವ್ಯಾಪ್ತಿಯ ಬಾಣಸವಾಡಿ ಮುಖ್ಯರಸ್ತೆಯಲ್ಲಿರುವ ನ್ಯೂ ಬಾಲ್ಡವಿನ್ ಶಾಲೆಯ ಮುಂಭಾಗದಲ್ಲಿ ರಸ್ತೆಯ ಎರಡೂ ಕಡೆಗಳಲ್ಲಿ ವಾಹನ ನಿಲುಗಡೆ ಮಾಡುತ್ತಿರುವುದರಿಂದ ವಾಹನ ಸವಾರರು ಹಾಗೂ ಸಾರ್ವಜನಿಕರಿಗೆ ತೊಂದರೆಯಾಗುತ್ತಿದ್ದು, ಈ ಬಗ್ಗೆ ಸಂಚಾರ ಇಲಾಖೆಯವರು ಕ್ರಮ ವಹಿಸಲು ಸಭೆಗೆ ತಿಳಿಸಿದರು. | ರಾಮಮೂರ್ತಿನಗರ ಸಂಚಾರ ಪೊಲೀಸ್ ಠಾಣೆ **Ramamurthy Nagar Police Station Ramamurthy Nagar (Traffic Police Department)** |

ಕೊನೆಯದಾಗಿ ಮಾನ್ಯ ಅಧ್ಯಕ್ಷರು, ವಾರ್ಡ್ ಸಮಿತಿ ನೋಡೆಲ್ ಅಧಿಕಾರಿಗಳು ಮಾತನಾಡಿ, ವಾರ್ಡ್ ಕಮಿಟಿ ಸಭೆಗೆ ಗೈರು ಹಾಜರಾಗಿರುವ ಎಲ್ಲಾ ಅಧಿಕಾರಿ/ಸಿಬ್ಬಂದಿಗಳು ಕಡ್ಡಾಯವಾಗಿ ಮುಂದಿನ ಸಭೆಗೆ ಹಾಜರಿರಲು ಕ್ರಮ ವಹಿಸಲು ಸೂಚಿಸಿ, ಇಂದಿನ ಸಭೆಯಲ್ಲಿ ಚರ್ಚಿಸಿ ತೀರ್ಮಾನಿಸಿರುವ ಎಲ್ಲಾ ವಿಷಯಗಳ ಬಗ್ಗೆ ಆಯಾ ಇಲಾಖೆಯ ಅಧಿಕಾರಿ / ನೌಕರರುಗಳು ಕ್ರಮ ಕೈಗೊಂಡು ಮುಂದಿನ ಸಭೆಗೆ ತಿಳಿಸಲು ಆದೇಶಿಸಿ, ಸಭೆಯನ್ನು ಮುಕ್ತಾಯಗೊಳಿಸಿದರು.

ವಾರ್ಡ್ ಸಮಿತಿ ಸದಸ್ಯ ಕಾರ್ಯದರ್ಶಿಗಳು
ಸಹಾಯಕ ಅಭಿಯಂತರರು
ವಾರ್ಡ್ ಸಂಖ್ಯೆ.27/100, ಬಾಣಸವಾಡಿ

ಅಧ್ಯಕ್ಷರು
(ನೋಡೆಲ್ ಅಧಿಕಾರಿಗಳು)
ವಾರ್ಡ್ ಸಂಖ್ಯೆ.27/100, ಬಾಣಸವಾಡಿ

***ಪ್ರತಿಯನ್ನು***

1) ವಲಯ ವಿಶೇಷ ಆಯುಕ್ತರು (ಪೂರ್ವ) ರವರ ಅವಗಾಹನೆಗಾಗಿ ಸಲ್ಲಿಸಿದೆ.
2) ಜಂಟಿ ಆಯುಕ್ತರರು (ಪೂರ್ವ) ರವರ ಅವಗಾಹನೆಗಾಗಿ ಸಲ್ಲಿಸಿದೆ.
3) ಮುಖ್ಯ ಅಭಿಯಂತರರು (ಪೂ) ರವರ ಅವಗಾಹನೆಗಾಗಿ ಸಲ್ಲಿಸಿದೆ.
4) ಕಾರ್ಯಪಾಲಕ ಅಭಿಯಂತರರು (ಸರ್ವಜ್ಞನಗರ) ರವರ ಅವಗಾಹನೆಗಾಗಿ.
5) ವಾರ್ಡ್ ಕಮಿಟಿಯ ಸದಸ್ಯರಿಗೆ/ಕಛೇರಿ ಕಡತಕ್ಕೆ.